| 1 | 2 | 3 | 4 | 5 |
|---|---|---|---|---|
| 3. | ಶಿವಪುರ<br>ಚಾಮರಾಜನಗರ ತಾಲ್ಲೂಕು | 102 | 2-20<br>(1-00) | ಬ್ಲಾಕ್ ಗ್ರಾನೈಟ್ |
| 4. | ಮುಳ್ಳೂರು ಮತ್ತು<br>ವೀರದೇವನಪುರ<br>ನಂಜನಗೂಡು ತಾಲ್ಲೂಕು | 250<br>ಮತ್ತು<br>187 | 6-00<br>(2-40) | ಬ್ಲಾಕ್ ಗ್ರಾನೈಟ್ |
| | ಆ) ಬೆಂಗಳೂರು ಜಿಲ್ಲೆ | | | |
| 1. | ಸುಳ್ಳೇರಿ<br>ಚನ್ನಪಟ್ಟಣ ತಾಲ್ಲೂಕು | 482 | 88-00<br>(32-80) | ಮಲ್ಟಿಕಲರ್ ಗ್ರಾನೈಟ್ |
| 2. | ಸುಳ್ಳೇರಿ<br>ಚನ್ನಪಟ್ಟಣ ತಾಲ್ಲೂಕು | 483 | 10-00<br>(4-00) | ಮಲ್ಟಿಕಲರ್ ಗ್ರಾನೈಟ್ |
| | ಇ) ತುಮಕೂರು ಜಿಲ್ಲೆ | | | |
| 1. | ನಂದಿಹಳ್ಳಿ<br>ತುಮಕೂರು ತಾಲ್ಲೂಕು | 42 | 5-00<br>(2-00) | ಪಿಂಕ್ ಪಾರ್‌ಫರಿ |
| 2. | ಹೊಡೆಕಲ್<br>ತುಮಕೂರು ತಾಲ್ಲೂಕು | 22 | 5-00<br>(2-00) | ಪಿಂಕ್ ಪಾರ್‌ಫರಿ |
| 3. | ನಾಗೇನಹಳ್ಳಿ<br>ಕುಣಿಗಲ್ ತಾಲ್ಲೂಕು | 15 | 4-30<br>(1-90) | ಮಲ್ಟಿಕಲರ್ ಗ್ರಾನೈಟ್ |

## ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ

**491 (674)** ಶ್ರೀ ವಿಜಯಶಂಕರ್ ಸಿ.ಹೆಚ್. (ಹುಣಸೂರು):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದೆರಡು ವರ್ಷಗಳಲ್ಲಿ ಪರಿಶಿಷ್ಟ ವರ್ಗ ಪರಿಶಿಷ್ಟ ಪಂಗಡದ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಕೊರೆದ ಕೊಳವೆ ಬಾವಿಗಳೆಷ್ಟು? ಎಷ್ಟು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ, ಪೂರ್ಣಗೊಳ್ಳದಿರುವ ಯೋಜನೆಗಳೆಷ್ಟು? ಮತ್ತು ಪೂರ್ಣಗೊಳ್ಳದಿದ್ದರೆ ಕಾರಣಗಳೇನು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) 1994-95ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಒಟ್ಟು 1263 ಕೊಳವೆಬಾವಿಗಳನ್ನು ತೊರೆಯಲಾಗಿದೆ. ಈ ಪೈಕಿ 210 ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಯೋಜನೆ ಪೂರ್ಣಗೊಳಿಸಲಾಗಿದೆ. 1995-96ನೇ ಸಾಲಿನಲ್ಲಿ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಒಟ್ಟು 1032 ಕೊಳವೆಬಾವಿಗಳನ್ನು ಕೊರೆಯಲಾಗಿದ್ದು ಆ ಪೈಕಿ 268 ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಿ ಯೋಜನೆ ಪೂರ್ಣಗೊಳಿಸಲಾಗಿದೆ. ಹಾಗೂ ಗಂಗಾ ಕಲ್ಯಾಣ ಯೋಜನೆಯಡಿ 715 ಬಾವಿಗಳನ್ನು ಕೊರೆಯಲಾಗಿದೆ. ಈ ಪೈಕಿ 27 ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಅಂದರೆ ಕಳೆದ ಎರಡು ವರ್ಷಗಳಲ್ಲಿ ಒಟ್ಟು 3010 ಕೊಳವೆಬಾವಿಗಳ ಪೈಕಿ 505 ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇನ್ನು 2505 ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಯೋಜನೆ ಪೂರ್ಣಗೊಳಿಸಲಾಗುವುದು.

## ಆಶ್ರಮ ಶಾಲೆಗಳಿಗೆ ಶಿಕ್ಷಕರನ್ನು ಖಾಯಂ ಆಗಿ ನಿಯೋಜಿಸುವುದು

492 (675) ಶ್ರೀ ವಿಜಯಶಂಕರ್ ಸಿ.ಹೆಚ್. (ಹುಣಸೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವೆ?

ಅ) ರಾಜ್ಯದಲ್ಲಿರುವ ಅನೇಕ ಆಶ್ರಮ ಶಾಲೆಗಳಿಗೆ ಖಾಯಂ ಶಿಕ್ಷಕರಿಲ್ಲದ ವಿಚಾರವು ಸರ್ಕಾರದ ಗಮನದಲ್ಲಿದೆಯೇ? ಹಾಗಿದ್ದರೆ, ಖಾಯಂ ಶಿಕ್ಷಕರನ್ನು ತುಂಬಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಏನು? ಮತ್ತು ಇನ್ನು ಎಷ್ಟು ದಿನಗಳಲ್ಲಿ ಖಾಯಂ ಶಿಕ್ಷಕನ್ನು ಒದಗಿಸಿಕೊಡಲಾಗುವುದು?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ ಅನೇಕ ಆಶ್ರಮ ಶಾಲೆಗಳಲ್ಲಿ ಖಾಯಂ ಶಿಕ್ಷಕರಿಲ್ಲದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರವು ಆದೇಶ ಸಂಖ್ಯೆ:ಎಸ್‌ಡಬ್ಲ್ಯೂಎಲ್ 61 ಎಸ್‌ಇಪಿ 89, ದಿನಾಂಕ:29-11-93ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿನ ಗ್ರೂಪ್ 'ಸಿ' ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಿತ್ತು. ಆದರಂತೆ ಅರ್ಜಿಗಳನ್ನು ಆಹ್ವಾನಿಸಿದ್ದು, ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಂಡಿತ್ತು; ಈ ಮಧ್ಯೆ ಸರ್ಕಾರದ ಆದೇಶ ಸಂಖ್ಯೆ:ಸಕಇ 251 ಬಿಸಿಎ 94, ದಿನಾಂಕ:31-1-95ರಲ್ಲಿ ಜಾರಿಯಲ್ಲಿದ್ದ ಕ್ರಮಿಲೀಯರ್ ನೀತಿಯನ್ನು ದಿನಾಂಕ:1-1-94ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಆದೇಶ ಸಂಖ್ಯೆ:ಸಕಇ 394 ಬಿಸಿಎ 95, ದಿನಾಂಕ:14-2-96ರಲ್ಲಿ ಹೊರಡಿಸಿ, ದಿನಾಂಕ:1-1-94ರ ನಂತರ ಯಾವುದೇ ಇಲಾಖೆಯಲ್ಲಿ ನೇಮಕಾತಿ ಸಲುವಾಗಿ ಪ್ರಕಟಣೆಗಳನ್ನು ಹೊರಡಿಸಲಾದ ಅಧಿಸೂಚನೆ ಪ್ರಕಾರ